ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ ಅವ್ಯಕ್ತ ಮುರಳಿ 15-03-1999.

# *ಕರ್ಮಾತೀತ ಸ್ಥಿತಿಯವರೆಗೆ ತಲುಪಲು, ನಿಯಂತ್ರಣಾ ಶಕ್ತಿಯನ್ನು ಹೆಚ್ಚಿಸಿಕೊಳ್ಳಿ ಮತ್ತು ಸ್ವ-ರಾಜ್ಯದ ಅಧಿಕಾರಿ ಆಗಿ.*

(कर्मातीत अवस्था तक पहुंचने के लिए कन्ट्रोलिंग पावर को बढ़ाओ, स्वराज्य अधिकारी बनो)

ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ಬಾಪ್‌ದಾದಾರವರು ಎಲ್ಲಾ ಕಡೆಯ ತನ್ನ ರಾಜಕುಮಾರ ರಾಜಕುಮಾರಿಯರನ್ನು, ಪರಮಾತ್ಮನ ಪ್ರೀತಿಯ ಮಕ್ಕಳನ್ನು ನೋಡುತ್ತಿದ್ದಾರೆ. ಇಂತಹ ಪರಮಾತ್ಮನ ಪಾಲನೆ ಅಥವಾ ಪರಮಾತ್ಮನ ಪ್ರೀತಿಯು ಕೆಲವೇ ಕೆಲವು ಮಕ್ಕಳಿಗೆ ಪ್ರಾಪ್ತಿಯಾಗುತ್ತದೆ.ಅತಿ ವಿರಳವಾಗಿ ಕೆಲವರಲ್ಲಿ ಕೆಲವು ಮಕ್ಕಳು ಇಂತಹ ಭಾಗ್ಯಕ್ಕೆ ಅರ್ಹರಾಗುತ್ತಾರೆ. ಅಂತಹ ಭಾಗ್ಯವಂತ ಮಕ್ಕಳನ್ನು ನೋಡಿ ಬಾಪ್‌ದಾದಾರವರೂ ಹರ್ಷಿತವಾಗುತ್ತಾರೆ. ರಾಜ್ಯ ಭಾಗ್ಯವನ್ನು ಪಡೆಯುವ ಮಕ್ಕಳು ಅರ್ಥಾತ್ ರಾಜಕುಮಾರರು. ಸ್ವಯಂನ್ನು ರಾಜನೆಂದು ಭಾವಿಸುತ್ತಿದ್ದೀರಾ? ಹೆಸರೇ ರಾಜಯೋಗಿ. ರಾಜಯೋಗಿ ಎಂದರೆ ರಾಜನ ಮಕ್ಕಳು. ವರ್ತಮಾನ ಸಮಯದಲ್ಲೂ ರಾಜರಾಗಿದ್ದೀರಿ ಹಾಗೂ ಭವಿಷ್ಯದಲ್ಲೂ ರಾಜರಾಗುತ್ತೀರಿ. ತಮ್ಮ ಡಬಲ್ ರಾಜ್ಯ ಪದವಿಯನ್ನು ಅನುಭವ ಮಾಡುತ್ತಿದ್ದೀರಾ? ನಾನು ರಾಜನಾಗಿದ್ದೇನೆಯೇ ಎಂದು ತಮ್ಮನ್ನು ತಾವು ಅವಲೋಕಿಸಿಕೊಳ್ಳಬೇಕು. ಸ್ವ--ರಾಜ್ಯದ ಅಧಿಕಾರಿ ಆಗಿದ್ದೇನೆಯೇ? ರಾಜ್ಯದ ಪ್ರತಿಯೊಬ್ಬ

ಕರ್ಮಚಾರಿಯೂ ತಮ್ಮ ಆದೇಶವನ್ನು ಕಾರ್ಯರೂಪಕ್ಕೆ ತರುತ್ತಿದ್ದಾರೆಯೇ? ರಾಜನ ವಿಶೇಷತೆ ಏನಾಗಿರುತ್ತದೆ, ಅದಂತೂ ಗೊತ್ತಿದೆಯಲ್ಲವೇ? ಆಳುವ(ಪರಿಪಾಲಿಸುವ ರೂಲಿಂಗ್) ಹಾಗೂ ನಿಯಂತ್ರಿಸುವ(ಕಂಟ್ರೋಲಿಂಗ್ ಪವರ್) ಶಕ್ತಿ ಎರಡನ್ನೂ ತಾವು ಪಡೆದುಕೊಂಡಿದ್ದೀರಾ? ರಾಜ್ಯದ ಕರ್ಮಚಾರಿಗಳು ಸದಾ ತಮ್ಮ ನಿಯಂತ್ರಣದಲ್ಲಿ ಇರುತ್ತಾರೆಯೇ ಎಂದು ತಮ್ಮನ್ನು ತಾವು ಕೇಳಿಕೊಳ್ಳಿ .

ಇಂದು ಬಾಪ್‌ದಾದಾರವರು ಮಕ್ಕಳ ನಿಯಂತ್ರಣಾ ಶಕ್ತಿ ಮತ್ತು ಆಡಳಿತದ ಶಕ್ತಿಯನ್ನು ಪರಿಶೀಲಿಸುತ್ತಿದ್ದರು, ಆಗ ಏನು ನೋಡಿರಬಹುದು? ತಮಗೆಲ್ಲ ಗೊತ್ತೇ ಇದೆ. ಅಖಂಡ ರಾಜ್ಯದ ಅಧಿಕಾರ ಇನ್ನೂವರೆಗೂ ಎಲ್ಲರಿಗೂ ಸಿಕ್ಕಿಲ್ಲ ಎಂದು ನೋಡಿದರು. ಅಖಂಡವು ಮಧ್ಯದಲ್ಲಿ ಖಂಡಿತವಾಗುತ್ತಿದೆ. ಏಕೆ? ಸದಾ ಸ್ವರಾಜ್ಯದ ಬದಲು, ಪರರಾಜ್ಯ ಸಹ ಖಂಡಿತ ಮಾಡಿಬಿಡುತ್ತದೆ. ಇಲ್ಲಿ ಪರರಾಜ್ಯ ಎಂದರೆ - ಕರ್ಮೇಂದ್ರಿಯಗಳು. ಕರ್ಮೇಂದ್ರಿಯಗಳು ಸ್ವಯಂನ ಬದಲಾಗಿ ಪರರ ಅಧೀನವಾಗಿರುತ್ತವೆ. ಮಾಯೆಯ ರಾಜ್ಯದ ಪ್ರಭಾವ ಅಂದರೆ ಪರರ ಅಧೀನವಾಗಿರುವುದು. ವರ್ತಮಾನ ಸಮಯದಲ್ಲಿ ಕೆಲವೇ ಕೆಲವರು ಸರಿಯಾಗಿದ್ದಾರೆ ಹಾಗೂ ಹೆಚ್ಚಿನವರು ಮಾಯೆಯ ವಿಶೇಷ ಪ್ರಭಾವಕ್ಕೆ ಅಧೀನರಾಗಿದ್ದಾರೆ. ನಮ್ಮ ಆದಿ ಅನಾದಿ ಸಂಸ್ಕಾರಗಳ ನಡುವೆ ಮಧ್ಯದ ಸಂಸ್ಕಾರ ಅಂದರೆ ದ್ವಾಪರದಿಂದ ಅಂತ್ಯದವರೆಗಿನ ಸಂಸ್ಕಾರಗಳ ಪ್ರಭಾವದಲ್ಲಿ ಬರುತ್ತಿವೆ. ನಮ್ಮ ಅಂತ್ಯದ ಸಂಸ್ಕಾರಗಳು ನಮ್ಮ ಕರ್ಮೇಂದ್ರಿಯಗಳ ಮೇಲಿನ ಅಧಿಪತ್ಯವನ್ನು ಖಂಡಿಸಿ ಬಿಡುತ್ತವೆ. ಅಂತ್ಯದ ಸಂಸ್ಕಾರಗಳಲ್ಲೇ ವ್ಯರ್ಥವನ್ನು ಯೋಚಿಸುವುದು, ವ್ಯರ್ಥವಾಗಿ ಸಮಯ ಕಳೆಯುವುದು, ವ್ಯರ್ಥ ಮಾತುಕತೆ ಅದು ಕೇಳುವುದೇ ಆಗಿರಬಹುದು ಅಥವಾ ಹೇಳುವುದೇ ಆಗಿರಬಹುದು ಇವೆಲ್ಲವೂ ಬರುತ್ತವೆ. ಒಂದು ಕಡೆ ವ್ಯರ್ಥದ ಸಂಸ್ಕಾರ ಇನ್ನೊಂದೆಡೆ ಹುಡುಗಾಟಿಕೆಯ(ಸೋಮಾರಿತನ& ನಿರ್ಲಕ್ಷ್ಯ) ಸಂಸ್ಕಾರಗಳು ಇವು ಬೇರೆ ಬೇರೆ ರೂಪಗಳಲ್ಲಿ ಸ್ವರಾಜ್ಯವನ್ನು, ಅಂದರೆ ನಮ್ಮ ಕರ್ಮೇಂದ್ರಿಯಗಳ ಮೇಲೆ ನಮ್ಮ ಅಧಿಪತ್ಯವನ್ನು ಖಂಡಿಸಿಬಿಡುತ್ತವೆ. ಮಕ್ಕಳು ಹೇಳುತ್ತಿರುತ್ತಾರೆ ಸಮಯ ಸಮೀಪ ಬರುತ್ತಿದೆ ಆದರೆ ಆರಂಭದಲ್ಲಿ ಇರದ ಸಂಸ್ಕಾರಗಳು ಈಗ ಅಲ್ಲಿ ಇಲ್ಲಿ ಪ್ರತ್ಯಕ್ಷವಾಗುತ್ತಿವೆ, ವಾಯುಮಂಡಲದಲ್ಲಿ ಸಂಸ್ಕಾರಗಳು ಪ್ರತ್ಯಕ್ಷವಾಗುತ್ತಿವೆ. ಇದಕ್ಕೆ ಕಾರಣವೇನು? ಇದು ಮಾಯೆಯ ಯುದ್ಧಕ್ಕೆ ಸಾಧನವಾಗಿದೆ. ಮಾಯೆಯು  ಸಂಸ್ಕಾರಗಳನ್ನು ತನ್ನದಾಗಿಸಿಕೊಂಡು ಪರಮಾತ್ಮನ ಮಾರ್ಗದಲ್ಲಿ ಅಂದರೆ ಶ್ರೀಮತದಲ್ಲಿ ಬಲಹೀನರಾಗುವಂತೆ ಮಾಡುತ್ತದೆ. ಮಕ್ಕಳು ಯೋಚಿಸುತ್ತಾರೆ - ಇಲ್ಲಿಯವರೆಗೂ ಹೀಗೆ ಇದ್ದೇವೆ ಬಾಬಾರವರ ಸಮಾನತೆಯ ಸಫಲತೆ ಸಿಗುತ್ತದೆಯೋ ಇಲ್ಲವೋ! ಎಲ್ಲಿಯೋ ಯಾವುದೋ ಮಾತಿನಲ್ಲಿ ದುರ್ಬಲತೆ ಇರಬಹುದು ಅದೇ ದೌರ್ಬಲ್ಯದ ರೂಪದಲ್ಲಿ, ಮಾಯೆಯು ಮನಸ್ಸು ಮುರಿಯುವಂತೆ ಮಾಡಲು ಪ್ರಯತ್ನಪಡುತ್ತದೆ . ಬಹಳ ಒಳ್ಳೆಯದು. ಜ್ಞಾನಮಾರ್ಗದಲ್ಲಿ ನಡೆಯುತ್ತಿರುವಾಗ ಯಾವುದಾದರೂ ರೀತಿಯಲ್ಲಿ ಮಾಯೆಯು ಹಳೆಯ ಸಂಸ್ಕಾರಗಳ ಮೇಲೆ ದಾಳಿ ಮಾಡಿ ಪ್ರತ್ಯಕ್ಷ ಮಾಡುವ ಮೂಲಕ ಹೃದಯವನ್ನು ನಿರಾಶೆಗೊಳಿಸಲು ಪ್ರಯತ್ನಿಸುತ್ತದೆ. ಅಂತಿಮದಲ್ಲಿ ಎಲ್ಲಾ ಸಂಸ್ಕಾರಗಳು ಸಮಾಪ್ತಿ ಆಗಬೇಕಾಗಿದೆ ಆದ್ದರಿಂದ ಕೆಲವೊಮ್ಮೆ ಹಳೆಯ ಸಂಸ್ಕಾರಗಳು ಪ್ರತ್ಯಕ್ಷವಾಗುತ್ತವೆ. ಆದರೆ ಬಾಪ್‌ದಾದಾ  ಅದೃಷ್ಟಶಾಲಿ ಮಕ್ಕಳಾದ ತಮ್ಮೆಲ್ಲರಿಗೂ ಸಂಕೇತ ಕೊಡುತ್ತಿದ್ದಾರೆ- ಭಯ ಪಡಬೇಡಿ ಮಾಯೆಯ ತಂತ್ರಗಳನ್ನು ಅರ್ಥ ಮಾಡಿಕೊಳ್ಳಿ. ಆಲಸ್ಯ ಮತ್ತು ವ್ಯರ್ಥ ಇದರಲ್ಲಿ ನೆಗೆಟಿವ್ ಕೂಡ ಬರುತ್ತದೆ - ಈ ಎರಡು ಸಂಸ್ಕಾರಗಳ ಬಗ್ಗೆ ವಿಶೇಷ ಗಮನ ಹರಿಸಿ ಇವೆರಡೂ

ಸಂಸ್ಕಾರಗಳು ವರ್ತಮಾನ ಸಮಯದಲ್ಲಿ ಮಾಯೆಯು ನಮ್ಮ ಮೇಲೆ ಆಕ್ರಮಣ ಮಾಡುವ ಸಾಧನಗಳಾಗಿವೆ ಎಂದು ಅರ್ಥ ಮಾಡಿಕೊಳ್ಳಿರಿ.

ತಂದೆಯ ಜೊತೆಯ ಅನುಭವ, ಕಂಬೈಂಡ್ ಸ್ವರೂಪದ ಅನುಭವವನ್ನು ಪ್ರತ್ಯಕ್ಷ ಮಾಡಿಕೊಳ್ಳಿರಿ. ತಂದೆಯು ನನ್ನವರೇ ಆಗಿದ್ದಾರೆ ಜೊತೆಗಂತೂ ಇದ್ದೇ ಇರುತ್ತಾರೆ ಎಂದು ತಿಳಿಯುವುದಲ್ಲ. ತಂದೆಯ ಜೊತೆಗಿನ ಅನುಭವ ಪ್ರ್ಯಾಕ್ಟಿಕಲ್ ಆಗಿ ಪ್ರತ್ಯಕ್ಷವಾಗಬೇಕು. ಆಗ ಈ ಮಾಯೆಯ ಆಕ್ರಮಣವಾಗುವುದಿಲ್ಲ, ಸೋಲನ್ನಪುತ್ತದೆ. ಇದು ಮಾಯೆಯ ಸೋಲು ಆಕ್ರಮಣವಲ್ಲ. ಸುಮ್ಮನೆ ಏನಾಯ್ತು ಏಕಾಯಿತು ಎಂದು ಗಾಬರಿಯಾಗಬೇಡಿರಿ. ಧೈರ್ಯವಾಗಿರಿ ತಂದೆಯ ಜೊತೆಯನ್ನು ಸ್ಮೃತಿಯಲ್ಲಿಟ್ಟುಕೊಳ್ಳಿ ತಂದೆಯ ಜೊತೆಗಿದ್ದೇನೆಯೇ ಎಂದು ನಿಮ್ಮನ್ನು ನೀವು ಪರಿಶೀಲಿಸಿಕೊಳ್ಳಿ. ತಂದೆಯ ಜೊತೆಗಿನ ಅನುಭವ ಗುಪ್ತ ರೂಪದಲ್ಲಿ ಇಲ್ಲ ತಾನೆ? ತಂದೆಯು ನಮ್ಮೊಂದಿಗಿದ್ದಾರೆ ಎಂಬ ಜ್ಞಾನವಿದೆ, ಜ್ಞಾನದ ಜೊತೆ ಜೊತೆಗೆ ತಂದೆಯ ಶಕ್ತಿಗಳು ನಿಮ್ಮೊಂದಿಗೆ ಇವೆಯೇ? ಸರ್ವಶಕ್ತಿವಂತನ ಜೊತೆ ಇದ್ದಾಗ ಎಲ್ಲಾ ಶಕ್ತಿಗಳನ್ನು ಪ್ರತ್ಯಕ್ಷದಲ್ಲಿ ಅನುಭವ ಮಾಡಿರಿ. ಇದನ್ನೇ ತಂದೆಯ ಜೊತೆಗಿರುವ ಅನುಭವ ಮಾಡುವುದು ಎಂದು ಹೇಳಲಾಗುತ್ತದೆ. ತಂದೆಯನ್ನು ಹೊರೆತುಪಡಿಸಿ ನನಗೆ ಬೇರೆ ಯಾರಿದ್ದಾರೆ, ತಂದೆಯು ಮಾತ್ರ ಇದ್ದಾರೆ ಎಂಬ ಸೋಮಾರಿತನದಲ್ಲಿ ಬರಬೇಡಿರಿ. ತಂದೆಯೇ ತಮ್ಮ ಜೊತೆಗಿದ್ದಾರೆ ಎಂದಾದರೆ ಅವರ ಸರ್ವ ಶಕ್ತಿಗಳು ತಮ್ಮ ಜೊತೆಗಿವೆಯೇ? ನೀವು ಲೋಕದ ಜನರಿಗೆ ಹೇಳುವಂತೆ ಪರಮಾತ್ಮ ಸರ್ವವ್ಯಾಪಿಯಾಗಿದ್ದರೆ ಪರಮಾತ್ಮನ ಗುಣಗಳು ಅನುಭವಕ್ಕೆ ಬರಬೇಕು ಮತ್ತು ಗೋಚರಿಸಬೇಕು ಹಾಗೆಯೇ ಬಾಪ್‌ದಾದಾ ನಮ್ಮನ್ನು ಕೇಳುತ್ತಾರೆ- ತಂದೆಯು ನಿಮ್ಮ ಜೊತೆಗಿದ್ದರೆ ಕಂಬೈನ್ಡ್ ಆಗಿದ್ದರೆ ಅವರ ಶಕ್ತಿಗಳು ತಮ್ಮ ಪ್ರತಿ ಕಾರ್ಯದಲ್ಲಿ ಅನುಭವವಾಗುತ್ತದೆಯೇ? ಇದು ಅನ್ಯರಿಗೂ ಅನುಭವವಾಗುತ್ತದೆಯೇ? ನೀವು ಏನು ಅರ್ಥ ಮಾಡಿಕೊಂಡಿದ್ದೀರಿ? ಡಬಲ್ ಫಾರಿನರ್ಸ್ ನೀವು ಏನು ಅರ್ಥ ಮಾಡಿಕೊಂಡಿದ್ದೀರಿ? ಸರ್ವಶಕ್ತಿಗಳು ತಮ್ಮೊಂದಿಗೆ ಇವೆಯೇ? ಸದಾಕಾಲಕ್ಕೂ ಇರುತ್ತವೆಯೇ? ಮೊದಲನೆಯ ಪ್ರಶ್ನೆಗೆ ಎಲ್ಲರೂ ಹೌದು ಎನ್ನುತ್ತಾರೆ. ಎರಡನೇ ಪ್ರಶ್ನೆ ಸದಾ? ಎಂದಾಗ ಯೋಚಿಸಲು ಪ್ರಾರಂಭಿಸುತ್ತೀರಿ. ಹಾಗಾದರೆ ಅಖಂಡ ರಾಜ್ಯ ಆಗಲಿಲ್ಲವಲ್ಲವೇ? ತಾವು ಯಾವ ಸವಾಲನ್ನು ತೆಗೆದುಕೊಂಡಿದ್ದೀರಿ ಅಖಂಡ ರಾಜ್ಯವನ್ನು ಸ್ಥಾಪಿಸುತ್ತಿದ್ದೀರಾ ಅಥವಾ ಖಂಡಿತ ರಾಜ್ಯವನ್ನು ಸ್ಥಾಪಿಸುತ್ತಿದ್ದೀರಾ? ಏನು ಮಾಡುತ್ತಿದ್ದೀರಿ? ಅಖಂಡ ರಾಜ್ಯ ಅಲ್ಲವೇ! ಟೀಚರ್ಸ್ ಹೇಳಿ, ಅಖಂಡ ರಾಜ್ಯ ತಾನೆ? ಹಾಗಾದರೆ ಈಗಲೇ ಪರಿಶೀಲಿಸಿ, ಅದು ಅಖಂಡ ಸ್ವರಾಜ್ಯವೇ? ರಾಜ್ಯ ಅಂದರೆ ಪ್ರತಿಫಲವನ್ನು ಶಾಶ್ವತವಾಗಿ ತೆಗೆದುಕೊಳ್ಳಬೇಕೆ ಅಥವಾ ಮಧ್ಯದಲ್ಲಿ ನಷ್ಟವಾದರೂ ಹಾನಿ ಇಲ್ಲವೇ? ಪಡೆಯುವಾಗ ಶಾಶ್ವತವಾಗಿ ಹಾಗೂ ಪುರುಷಾರ್ಥದಲ್ಲಿ ಕೆಲವೊಮ್ಮೆ ಮಾಡಿದರೆ ಆಗುತ್ತದೆ, ಎಂಬ ರೀತಿಯೇ? ಹೀಗೆ ಅಂದುಕೊಂಡಿದ್ದೀರಾ? ತಮ್ಮ ಜೀವನದ ಡಿಕ್ಷನರಿಯಿಂದ ಕೆಲವೊಮ್ಮೆ(ಸಮ್ ಟೈಮ್) ಮತ್ತು ಏನಾದರೂ (ಸಂಥಿಂಗ್) ಎಂಬ ಪದಗಳನ್ನು ತೆಗೆದುಹಾಕಲು ವಿದೇಶಿಯರಿಗೆ ಬಾಪ್‌ದಾದಾರವರು ಹೇಳಿದ್ದಾರೆ ಈಗ ಕೆಲವೊಮ್ಮೆ(ಸಮ್ ಟೈಮ್) ಮುಗಿದಿದೆಯೇ? ಜಯಂತಿ (ಅಕ್ಕನವರೇ) ಹೇಳಿರಿ. ಫಲಿತಾಂಶ ಕೊಡುತ್ತೀರಲ್ಲವೇ? ಹಾಗಾದರೆ ಕೆಲವೊಮ್ಮೆ(ಸಮ್ ಟೈಮ್) ಸಮಾಪ್ತಿ ಆಗಿದೆಯೇ? ಕೆಲವೊಮ್ಮೆ ಎಂಬ ಪದವನ್ನು ಯಾರೆಲ್ಲಾ ಸಮಾಪ್ತಿ ಮಾಡಿದ್ದೀರೋ ಅವರು ಕೈ ಎತ್ತಿ. ಸಮಾಪ್ತಿ ಆಯಿತೋ ಅಥವಾ ಸಮಾಪ್ತಿ ಆಗುತ್ತದೆಯೋ? ಎತ್ತರವಾಗಿ ಕೈಯೆತ್ತಿ. ಸೂಕ್ಷ್ಮವತನದ ಟಿವಿಯಲ್ಲಿ ತಮ್ಮ ಕೈಗಳು ಕಾಣುತ್ತಿವೆ, ಇಲ್ಲಿಯ ಟಿವಿಯಲ್ಲಿ ಎಲ್ಲರ ಕೈಗಳು ಕಾಣುವುದಿಲ್ಲ. ಇದು ಕಲಿಯುಗದ ಟಿವಿ ಅಲ್ಲವೇ, ಅಲ್ಲಿ ಜಾದುವಿನ ಟಿವಿಯಾಗಿದೆ ಆದ್ದರಿಂದ

ಎಲ್ಲರ ಕೈಗಳು ಕಾಣುತ್ತವೆ. ಬಹಳ ಒಳ್ಳೆಯದು ಆದರೂ ಬಹುತೇಕ ಎಲ್ಲರೂ ಕೈಗಳನ್ನು ಎತ್ತಿದ್ದಾರೆ ಅವರಿಗೆಲ್ಲ ಶಾಶ್ವತವಾದ ಅಭಿನಂದನೆಗಳು, ಒಳ್ಳೆಯದು! ಈಗ ಯಾರೆಲ್ಲ ಭಾರತವಾಸಿಗಳ ಎಲ್ಲಾ ಕರ್ಮೇಂದ್ರಿಯಗಳು ನಿಯಮಾನುಸಾರ ಮತ್ತು ವ್ಯವಸ್ಥೆಯಲ್ಲಿವೆ ಅಂದರೆ ಪ್ರ್ಯಾಕ್ಟಿಕಲ್ ಆಗಿ ಸದಾಕಾಲದ ಸ್ವರಾಜ್ಯದಲ್ಲಿವೆಯೋ ಅವರು ಕೈಯೆತ್ತಿ. ಧೃಡವಾಗಿ ಕೈಯೆತ್ತಿ, ಹಗುರವಾಗಿ ಅಲ್ಲ. ಸಭೆಯಲ್ಲಿ ಕೈಯೆತ್ತಿದ್ದು ಸದಾ ನೆನಪಿರಲಿ. ಆಮೇಲೆ ಬಾಪ್‌ದಾದಾರವರಿಗೆ ಮಧುರವಾದ ಮಾತುಗಳಲ್ಲಿ ಹೇಳುತ್ತಾರೆ-- ಬಾಬಾ ತಮಗಂತೂ ಗೊತ್ತಿದೆಯಲ್ಲವೇ. ಕೆಲವೊಮ್ಮೆ ಮಾಯೆ ಬಂದುಬಿಡುತ್ತದೆ ತಾನೇ! ಹಾಗಾಗಿ ತಮ್ಮ ಕೈಗಳ ಬಗ್ಗೆ ಜಾಗರೂಕರಾಗಿರಿ. ಒಳ್ಳೆಯದು ಆದರೂ ಧೈರ್ಯವನ್ನು ಇಟ್ಟಿದ್ದೀರಿ ಧೈರ್ಯವನ್ನು ಕಳೆದುಕೊಳ್ಳಬೇಡಿ. ಧೈರ್ಯಕ್ಕೆ ಬಾಪ್‌ದಾದಾರವರ ಸಹಾಯ ಖಂಡಿತವಾಗಿಯೂ ಇರುತ್ತದೆ.

ವರ್ತಮಾನ ಸಮಯಕ್ಕನುಗುಣವಾಗಿ ತಮ್ಮ ಮೇಲೆ, ತಮ್ಮ ಕರ್ಮೇಂದ್ರಿಯಗಳ ಮೇಲೆ ಅಂದರೆ ತಮಗೆ ತಮ್ಮ ಮೇಲೆ ಇರಬೇಕಾದ ನಿಯಂತ್ರಣಾ ಶಕ್ತಿ ಕಡಿಮೆಯಾಗಿದೆ ಎಂಬುದನ್ನು ಬಾಪ್‌ದಾದಾರವರು ನೋಡಿದರು. ಬಾಪ್‌ದಾದಾ ಮಕ್ಕಳ ಸಂಭಾಷಣೆಯನ್ನು ಕೇಳುತ್ತಾ ನಗುತ್ತಿದ್ದರು, ನಾಲ್ಕು ಗಂಟೆಗಳ ಶಕ್ತಿಯುತ ಯೋಗ ಆಗುತ್ತಿಲ್ಲ ಎಂದು ಮಕ್ಕಳು ಸಂಭಾಷಿಸುತ್ತಿದ್ದರು. ಬಾಪ್‌ದಾದಾ ಅವರು 8 ಗಂಟೆಯಿಂದ 4 ಗಂಟೆಗೆ ಇಳಿಸಿದರು ಈಗ ಮಕ್ಕಳು ಎರಡು ಗಂಟೆ ಸರಿಯಾಗಿದೆ ಎಂದು ಹೇಳುತ್ತಿದ್ದಾರೆ ಹಾಗಾದರೆ ಹೇಳಿ, ನಿಯಂತ್ರಿಸುವ ಶಕ್ತಿ ಇದೆಯೇ? ಮತ್ತು ಈ ಅಭ್ಯಾಸವನ್ನು ಇಂದಿನಿಂದ ಮಾಡದಿದ್ದರೆ, ನೀವು ಸಮಯಕ್ಕೆ ಪಾಸ್ ವಿತ್ ಆನರ್ ಮತ್ತು ರಾಜ್ಯಾಧಿಕಾರಿಗಳಾಗಲು ಹೇಗೆ ಸಾಧ್ಯವಾಗುತ್ತದೆ! ಆಗಲೇ ಬೇಕಲ್ಲವೇ? ಮಕ್ಕಳು ನಗುತ್ತಾರೆ, ಇಂದು ಬಾಪ್‌ದಾದಾ ಮಕ್ಕಳ ಅನೇಕ ಮಾತುಗಳನ್ನು ಕೇಳಿದ್ದಾರೆ ಮಕ್ಕಳು ಹೇಳುತ್ತಾರೆ, ಟ್ರಾಫಿಕ್ ಕಂಟ್ರೋಲ್ ಮೂರು ನಿಮಿಷ ಮಾಡಲು ಆಗುವುದಿಲ್ಲ ,ಶರೀರವನ್ನು ಕಂಟ್ರೋಲ್ ಮಾಡಬಹುದು, ಎದ್ದು ನಿಲ್ಲಬಹುದು, ಹೆಸರೇ ಆಗಿದೆ ಮನಸ್ಸಿನ ನಿಯಂತ್ರಣ ಆದರೆ ಕೆಲವೊಮ್ಮೆ ಮನಸ್ಸನ್ನು ನಿಯಂತ್ರಿಸಲಾಗುತ್ತದೆ ಕೆಲವೊಮ್ಮೆ ಆಗುತ್ತಿಲ್ಲ ಎಂದು ಹೇಳಿ ಮಕ್ಕಳು ಬಾಪ್‌ದಾದಾರವರನ್ನು ನಗಿಸುತ್ತಾರೆ ಹಾಗಾದರೆ ಇದಕ್ಕೆ ಕಾರಣವೇನು? ನಿಯಂತ್ರಣಾ ಶಕ್ತಿಯ ಕೊರತೆ. ಅದನ್ನು ಇನ್ನೂ ಹೆಚ್ಚಿಸಿಕೊಳ್ಳಬೇಕಾಗಿದೆ. ನಿಮ್ಮ ಕೈಯನ್ನು ಮೇಲಕ್ಕೆತ್ತಲು ಬಯಸಿ ಆದೇಶಿಸಿದರೆ ಮೇಲಕ್ಕೆತ್ತುತ್ತೀರಿ. ಕೈ ಮುರಿಯದಿದ್ದರೆ ಮಾತ್ರ ಮೇಲಕ್ಕೆ ಎತ್ತುತ್ತಿರಿ ಅಲ್ಲವೇ! ಹಾಗೆಯೇ ಮನಸ್ಸು, ಈ ಸೂಕ್ಷ್ಮ ಶಕ್ತಿಯನ್ನು ನಿಯಂತ್ರಣಕ್ಕೆ ತರಬೇಕು. ತರಲೇ ಬೇಕಾಗಿದೆ. ಆದೇಶಿಸಿರಿ -- ಮನಸ್ಸು ಸ್ಟಾಪ್ ಎಂದರೆ ಸ್ಟಾಪ್ ಆಗಬೇಕು. ಸೇವೆಯ ಬಗ್ಗೆ ಯೋಚಿಸಿ, ಸೇವೆಯಲ್ಲಿ ತೊಡಗಿಸಿ. ನೀವು ಪರಂಧಾಮಕ್ಕೆ ಹೋದರೆ, ಮನಸ್ಸು ಪರಂಧಾಮಕ್ಕೆ ಹೋಗಬೇಕು. ಸೂಕ್ಷ್ಮವತನಕ್ಕೆ ಹೋದರೆ, ಸೆಕೆಂಡ್ ನಲ್ಲಿ ಅಲ್ಲಿಗೆ ಹೋಗಬೇಕು ನೀವು ಏನು ಯೋಚಿಸುತ್ತೀರೋ, ಅದು ಆದೇಶವಾಗಲಿ. ಈಗ ಈ ಶಕ್ತಿಯನ್ನು ಹೆಚ್ಚಿಸಿಕೊಳ್ಳಿ ಸಣ್ಣ ಸಣ್ಣ ಸಂಸ್ಕಾರಗಳಲ್ಲಿ, ಯುದ್ಧಗಳಲ್ಲಿ ಸಮಯವನ್ನು ವ್ಯರ್ಥಗೊಳಿಸಬೇಡಿ, ಇಂದು ಈ ಸಂಸ್ಕಾರವನ್ನು ಓಡಿಸಿ, ನಾಳೆ ಇನ್ನೊಂದು ಸಂಸ್ಕಾರವನ್ನು ಓಡಿಸಿದಿರಿ ಎಂಬಂತೆ ಆಗಬಾರದು. ನಿಯಂತ್ರಣಾ ಶಕ್ತಿಯನ್ನು ಅಳವಡಿಸಿಕೊಂಡರೆ ಹೀಗೆ ವಿವಿಧ ಸಂಸ್ಕಾರಗಳ ಮೇಲೆ ಸಮಯ ಕಳೆಯಬೇಕಾಗಿಲ್ಲ- ಹೀಗೆ ಯೋಚಿಸಬಾರದು, ಹೀಗೆ ಮಾಡಬಾರದು, ಹೀಗೆ ಮಾತನಾಡಬಾರದು. ಇದೆಲ್ಲಾ ಸ್ಟಾಪ್. ಹಾಗಾಗಿ ಸ್ಟಾಪ್ ಆಗಿ ಬಿಡಬೇಕು. ಇದು ಕರ್ಮಾತೀತ ಸ್ಥಿತಿಯನ್ನು ತಲುಪುವ ವಿಧಾನವಾಗಿದೆ. ಹಾಗಾದರೆ ನೀವು ಕರ್ಮಾತೀರಾಗಬೇಕು ತಾನೆ? ನೀವೇ ಆಗಬೇಕು ಬೇರೆ ಯಾರು ಬರುವುದಿಲ್ಲ ಎಂದು ಬಾಪ್‌ದಾದಾ ಹೇಳುತ್ತಾರೆ. ತಾವೇ ಆಗಿದ್ದೀರಿ ತಮ್ಮನ್ನೇ ಜೊತೆಗೆ ಕರೆದುಕೊಂಡು ಹೋಗುತ್ತೇವೆ ಆದರೆ ಕರ್ಮಾತೀತರಾದವರನ್ನು ಕರೆದುಕೊಂಡು

ಹೋಗುತ್ತೇವೆ ಅಲ್ಲವೇ ಜೊತೆಗೆ ಬರುತ್ತೀರೋ ಅಥವಾ ಹಿಂಬಾಲಿಸುತ್ತೀರೋ? (ಜೊತೆಗೆ ಬರುತ್ತೇವೆ) ಇದನ್ನಂತೂ ತುಂಬಾ ಚೆನ್ನಾಗಿ ಹೇಳಿದಿರಿ. ಜೊತೆಗೆ ಬರುತ್ತೇವೆ, ಲೆಕ್ಕಾಚಾರಗಳನ್ನು ಸಮಾಪ್ತಿ ಮಾಡುತ್ತೀರಾ? ಇದಕ್ಕೆ ಹೌದು ಎಂದು ಹೇಳಲಿಲ್ಲ. ಕರ್ಮಾತೀತರಾಗಿ ಜೊತೆಗೆ ಬರುತ್ತೀರಲ್ಲವೇ ಜೊತೆಯಾಗಿ ನಡೆಯುವುದು ಎಂದರೆ ಒಡನಾಡಿಯಾಗಿ ನಡೆಯುವುದು ಜೋಡಿ ಚೆನ್ನಾಗಿ ಇರಬೇಕಲ್ಲವೇ ಅಥವಾ ಒಬ್ಬರು ಉದ್ದ ಒಬ್ಬರು ಗಿಡ್ಡವಿದ್ದರೆ ನಡೆಯುತ್ತದೆಯೇ? ಇಬ್ಬರು ಸಮಾನವಾಗಿ ಇರಬೇಕಲ್ಲವೇ! ಆದ್ದರಿಂದ ಕರ್ಮಾತೀತರಾಗಲೇಬೇಕು. ಹಾಗಾದರೆ ಏನು ಮಾಡುವಿರಿ? ಈಗ ತಮ್ಮ ರಾಜ್ಯವನ್ನು ಚೆನ್ನಾಗಿ ನಿಭಾಯಿಸಿ. ಪ್ರತಿದಿನ ತಮ್ಮ ನ್ಯಾಯಾಲಯದಲ್ಲಿ ವಿಚಾರಣೆ ನಡೆಸಿ. ರಾಜ್ಯಾಧಿಕಾರಿ ಆಗಿದ್ದೀರಲ್ಲವೇ! ಹಾಗಾದರೆ ತಮ್ಮ ನ್ಯಾಯಾಲಯವನ್ನು ನಡೆಸಿ, ಕರ್ಮೇಂದ್ರಿಯಗಳ ಕುಶಲತೆಯ ಬಗ್ಗೆ ಕೇಳಿ ತಿಳಿದುಕೊಳ್ಳಿ. ಕರ್ಮೇಂದ್ರಿಯಗಳು ಆದೇಶದ ಅನುಸಾರವಾಗಿ ಇವೆಯೇ ಎಂದು ಪರಿಶೀಲಿಸಿಕೊಳ್ಳಿ. ಬ್ರಹ್ಮಾ ತಂದೆಯೂ ಸಹ ಪ್ರತಿದಿನ ದರ್ಬಾರ್ ನಡೆಸುತ್ತಿದ್ದರು. ಅದರ ಬಗ್ಗೆ ಬರೆದಿಟ್ಟ ಪುಸ್ತಕ ಇದೆಯಲ್ಲವೇ. ಅದನ್ನು ಇವರಿಗೆಲ್ಲಾ ಹೇಳಿ, ತೋರಿಸಿ. ಬ್ರಹ್ಮಾ ತಂದೆಯೂ ಪರಿಶ್ರಮ ಪಟ್ಟರು, ಪ್ರತಿದಿನ ತಮ್ಮ ದರ್ಬಾರ್ ನಡೆಸುತ್ತಿದ್ದರು ಆಗಲೇ ಕರ್ಮಾತೀತರಾಗಲು ಸಾಧ್ಯವಾಯಿತು. ಹಾಗಾದರೆ ಈಗ ಎಷ್ಟು ಸಮಯ ಬೇಕು? ಅಥವಾ ಎವೆರೆಡಿ ಆಗಿದ್ದೀರೋ? ಇಂತಹ ಸ್ಥಿತಿಯಿಂದ ಸೇವೆ ಕೂಡ ತುಂಬಾ ತೀವ್ರ ಗತಿಯಲ್ಲಿ ಆಗುತ್ತದೆ ಏಕೆ? ಏಕೆಂದರೆ ಒಂದೇ ಸಮಯದಲ್ಲಿ ಮನಸ್ಸು ಶಕ್ತಿಶಾಲಿ, ಮಾತು ಶಕ್ತಿಶಾಲಿ, ಸಂಬಂಧಗಳಲ್ಲಿ ನಡತೆ ಹಾಗೂ ಮುಖ ಲಕ್ಷಣಗಳು ಶಕ್ತಿಶಾಲಿ ಆಗಿರುತ್ತವೆ. ಮೂರು ಸೇವೆಗಳು ಒಂದೇ ಸಮಯದಲ್ಲಿ ಆದರೆ ಅತ್ಯಂತ ವೇಗವಾಗಿ ಫಲಿತಾಂಶಗಳನ್ನು ನೀಡುತ್ತವೆ. ಈ ಸಾಧನೆಯೆಲ್ಲಿ ಸೇವೆ ಕಡಿಮೆಯಾಗುತ್ತದೆ ಎಂದು ಯೋಚಿಸಬೇಡಿ. ಇಲ್ಲ ಸಫಲತೆ ಸಹಜ ಅನಿಸುತ್ತದೆ ಮತ್ತು ಸೇವೆಗೆ ಸಾಧನವಾಗಿರುವವರೆಲ್ಲರೂ ಸಂಘಟಿತರಾಗಿ ಅಂತಹ ವೇದಿಕೆಯನ್ನು ರಚಿಸಿದರೆ ಕಡಿಮೆ ಶ್ರಮ ಮತ್ತು ಹೆಚ್ಚಿನ ಯಶಸ್ಸು ಸಿಗುತ್ತದೆ. ಹಾಗಾಗಿ ತಮ್ಮ ವಿಶೇಷ ಗಮನವನ್ನು ನಿಯಂತ್ರಣಾ ಶಕ್ತಿಯನ್ನು ಹೆಚ್ಚಿಸುವಲ್ಲಿ ಕೊಡಿ. ನಮ್ಮ ಸಂಕಲ್ಪಗಳು, ಸಮಯ, ಸಂಸ್ಕಾರಗಳು ಎಲ್ಲವುಗಳ ಮೇಲೆ ನಿಯಂತ್ರಣವಿರಲಿ. ಬಾಪ್‌ದಾದಾ ಅನೇಕ ಬಾರಿ ಹೇಳಿದ್ದಾರೆ-- ನೀವೆಲ್ಲರೂ ರಾಜರಾಗಿದ್ದೀರಿ ನಿಮಗೆ ಯಾವಾಗ ಬೇಕೊ, ಹೇಗೆ ಬೇಕೋ, ಎಲ್ಲಿ ಬೇಕೋ, ಎಷ್ಟು ಬೇಕೋ ಎಷ್ಟು ಸಮಯ ಬೇಕೋ ಅಷ್ಟು ನಿಮ್ಮ ಮನಸ್ಸು ಮತ್ತು ಬುದ್ಧಿ ನಿಯಮ ಮತ್ತು ಅಜ್ಞಾನುಸಾರ ಇರಬೇಕು. ಇದನ್ನು ಮಾಡಬೇಡ ಎಂದು ಹೇಳಿದರೂ, ಅದು ನಡೆಯುತ್ತಿದ್ದರೆ, ನೀವು ಅದನ್ನು ಮಾಡುತ್ತಿದ್ದರೆ ಅದನ್ನು ಲಾ ಮತ್ತು ಆರ್ಡರ್ ಎಂದು ಹೇಳಲಾಗುವುದಿಲ್ಲ. ಆದ್ದರಿಂದ ಸ್ವರಾಜ್ಯಾಧಿಕಾರಿಗಳಾದ ನೀವು ಸದಾ ತಮ್ಮ ರಾಜ್ಯವನ್ನು ಪ್ರತ್ಯಕ್ಷ ಸ್ವರೂಪದಲ್ಲಿ ತಂದುಕೊಳ್ಳಿ. ತರಬೇಕಲ್ಲವೇ? ತರುತ್ತಿದ್ದೀರಿ ಆದರೆ ಬಾಪ್‌ದಾದಾ ಹೇಳುತ್ತಾರೆ- ಸದಾ ಎಂಬ ಶಬ್ದವನ್ನು ಸೇರಿಸಿ. ಬಾಪ್‌ದಾದಾ ಇನ್ನೊಮ್ಮೆ ಕೊನೆಯ ಬಾರಿ ಬರುತ್ತಾರೆ, ಇನ್ನೂ ಒಂದು ಟರ್ನ್ ಇದೆ. ಆ ಟರ್ನನಲ್ಲಿ (ಸರದಿಯಲ್ಲಿ) ಫಲಿತಾಂಶ ಕೇಳುತ್ತಾರೆ. 15 ದಿನಗಳು ಇವೆ ತಾನೇ. ಹಾಗಾದರೆ 15 ದಿನಗಳಲ್ಲಿ ಸ್ವಲ್ಪ ಫಲಿತಾಂಶವನ್ನು ತೋರಿಸುತ್ತಿರೋ ಅಥವಾ ಇಲ್ಲವೇ? ಟೀಚರ್ಸ್ ಹೇಳಿ 15 ದಿನಗಳಲ್ಲಿ ಫಲಿತಾಂಶ ತೋರಿಸುತ್ತೀರಾ?

ಒಳ್ಳೆಯದು ಮಧುಬನದವರು 15 ದಿನಗಳಲ್ಲಿ ಫಲಿತಾಂಶವನ್ನು ತೋರಿಸುತ್ತಾರೆ ಈಗ ಹೇಳಿ ಹೌದು ಅಥವಾ ಇಲ್ಲ! ಈಗ ಕೈ ಎತ್ತಿ( ಎಲ್ಲರೂ ಕೈಯೆತ್ತಿದರು). ತಮ್ಮ ಕೈಗಳ ಬಗ್ಗೆ ಎಚ್ಚರಿಕೆ ಇರಲಿ ಯಾರು ಪ್ರಯತ್ನಪಡುವವರಿದ್ದಿರೋ

ಅವರು ಕೈ ಎತ್ತಿ ಜ್ಞಾನ ಸರೋವರ, ಶಾಂತಿವನದವರು ಎದ್ದೇಳಿ( ಬಾಪ್ ದಾದಾ ಅವರು ಮಧುಬನ, ಜ್ಞಾನ ಸರೋವರ, ಶಾಂತಿವನದ ಮುಖ್ಯ ಸಹೋದರ ಸಹೋದರಿಯರನ್ನು ಮುಂಬಾಗಕ್ಕೆ ಕರೆದರು)

ಬಾಪ್‌ದಾದಾರವರು ತಮ್ಮೆಲ್ಲರನ್ನು ತಮ್ಮ ದರ್ಶನ ಕೊಡಿಸುವುದಕ್ಕಾಗಿ ಕರೆದಿದ್ದಾರೆ. ತಮ್ಮನ್ನು ನೋಡಿ ಎಲ್ಲರೂ ಸಂತೋಷಪಡುತ್ತಾರೆ. ಬಾಪ್‌ದಾದಾರವರ ಇಚ್ಛೆ ಏನು ಎಂಬುದನ್ನು ಹೇಳುತ್ತಾರೆ. ಅದು ಪಾಂಡವ ಭವನ, ಶಾಂತಿವನ, ಜ್ಞಾನ ಸರೋವರ ಅಥವಾ ಹಾಸ್ಪಿಟಲ್ ಆಗಿರಲಿ-- ನಾಲ್ಕು ಧಾಮಗಳಿವೆ ಐದನೆಯದು ಚಿಕ್ಕದಾಗಿದೆ. ಬಾಪ್‌ದಾದಾ ನಾಲ್ವರ ಪ್ರತಿಯೂ  ಒಂದೇ ಆಸೆಯನ್ನು ಹೊಂದಿದ್ದಾರೆ . ಬಾಪ್‌ದಾದಾ ಮೂರು ಮೂರು ತಿಂಗಳು ನಾಲ್ಕು ಧಾಮಗಳಲ್ಲಿ ಅಖಂಡ, ನಿರ್ವಿಘ್ನ. ದೃಢವಾದ ಸ್ವರಾಜ್ಯ ಅಧಿಕಾರಿ ರಾಜರುಗಳ ಫಲಿತಾಂಶವನ್ನು ನೋಡಲು ಇಚ್ಛಿಸುತ್ತಾರೆ. ಮೂರು ತಿಂಗಳ ಕಾಲ ಅಲ್ಲಿಂದ ಇಲ್ಲಿಂದ ಬೇರೆ ಯಾವ ಮಾತೂ ಕೇಳಿ ಬರಬಾರದು. ಎಲ್ಲರೂ ಸ್ವರಾಜ್ಯಾಧಿಕಾರಿ, ನಂಬರ್ ಒನ್ ಮೂರು ತಿಂಗಳ ಕಾಲ ಇಂತಹ ಫಲಿತಾಂಶವನ್ನು ಕೊಡಲು ಸಾಧ್ಯವೇ?( ನಿರ್ವೈರ್ ಅಣ್ಣನವರಿಗೆ)- ಪಾಂಡವರ ಕಡೆಯಿಂದ ನೀವು ಇದ್ದೀರಿ, ಆಗುತ್ತದೆಯೇ? ದಾದಿಯಂತೂ ಇದ್ದಾರೆ ಆದರೆ ಜೊತೆಗೆ ಇಲ್ಲಿ ಮುಂದೆ ಕುಳಿತವರೆಲ್ಲರೂ ಇದ್ದಾರೆ. ಹಾಗಾದರೆ ಇದು ಸಾಧ್ಯವೇ?( ದಾದಿ ಹೇಳುತ್ತಿದ್ದಾರೆ ಅದು ಸಾಧ್ಯ) ಪಾಂಡವ ಭವನದವರು ಕೈಯೆತ್ತಿ. ಆಗುತ್ತದೆಯೇ ಯಾರೋ ದುರ್ಬಲರಿದ್ದಾರೆ ಮತ್ತು ಅವರಿಗೆ ಏನಾದರೂ ಸಂಭವಿಸಿದೆ ಎಂದು ಭಾವಿಸೋಣ ಆಗ ನೀವು ಏನು ಮಾಡುತ್ತೀರಿ? ಸಹಕರಿಸುತ್ತಾ ಫಲಿತಾಂಶವನ್ನು ಕೊಡಬೇಕು ಎನ್ನುವುದು ತಮಗೆ ಗೊತ್ತಿದೆ. ಇಂತಹ ಧೈರ್ಯವಿದೆಯೇ? ಇದು ಸಾಧ್ಯವೇ ಅಥವಾ ಮಾತ್ರ ತಮ್ಮೊಬ್ಬರದ್ದೇ ಧೈರ್ಯವಿದೆಯೋ? ಬೇರೆಯವರ ಅಭಿಪ್ರಾಯವನ್ನು ಒಪ್ಪಿಕೊಳ್ಳುತ್ತೀರಾ? ಬೇರೆಯವರ ತಪ್ಪನ್ನು ಅಂತರ್ಯದಲ್ಲಿ ಇಟ್ಟುಕೊಳ್ಳುತ್ತೀರಾ? ವಾತಾವರಣದಲ್ಲಿ ಹರಡಬೇಡಿ, ಮುಚ್ಚಿಟ್ಟುಕೊಳ್ಳಿ, ಇದನ್ನು ಮಾಡಲು ಸಾಧ್ಯವೇ? ಹೌದು ಎಂದು ಜೋರಾಗಿ ಹೇಳಿ. ಅಭಿನಂದನೆಗಳು ಮೂರು ತಿಂಗಳ ನಂತರ ರಿಪೋರ್ಟ್ ನೋಡುತ್ತೇವೆ. ಯಾವುದೇ ಸ್ಥಾನದಿಂದ ಬೇರೆ ಯಾವ ವರದಿಯೂ ಬರಬಾರದು . ಪರಸ್ಪರ ತರಂಗಗಳನ್ನು ಹರಡಿಸಿ ಮತ್ತು ಪ್ರೀತಿಯಿಂದ ಪ್ರಕಂಪನಗಳನ್ನು ಕೊಡಿ ಜಗಳ ಮಾಡಬೇಡಿ. ಹೀಗೆಯೇ ಡಬಲ್ ವಿದೇಶಿಯರು ಫಲಿತಾಂಶವನ್ನು ನೀಡುತ್ತಿರಲ್ಲವೇ ಎಲ್ಲರೂ ಆಗಲೇಬೇಕಲ್ಲವೇ ತಮ್ಮ ಸೆಂಟರ್ ನಲ್ಲಿ ತಮ್ಮ ಜೊತೆಗಾರರೊಂದಿಗೆ ಮೂರು ತಿಂಗಳ ಫಲಿತಾಂಶವನ್ನು ಕೊಡುತ್ತೇವೆ ಎಂದು ಭಾವಿಸುವ ಡಬಲ್ ವಿದೇಶಿಯರು ಕೈ ಎತ್ತಿ. ಹೇಳಲು ಆಗುವುದಿಲ್ಲ ಆದರೆ ಪ್ರಯತ್ನಿಸುತ್ತೇವೆ ಎನ್ನುವವರು ಶುದ್ಧ ಹೃದಯವಿದೆ ಶುದ್ಧ ಹೃದಯವಿರುವವರಿಗೆ ಸಹಾಯ ಸಿಗುತ್ತದೆ ಒಳ್ಳೆಯದು. ( ನಂತರ ಬಾಪ್‌ದಾದಾರವರು ಎಲ್ಲಾ  ವಲಯಗಳ ಸಹೋದರ ಸಹೋದರಿಯರು ತಮ್ಮ ಕೈಗಳನ್ನು ಮೇಲಕ್ಕೆತ್ತಿ ಹಾಗೂ ತಮ್ಮ ಸ್ಥಾನದಲ್ಲಿ ನಿಲ್ಲುವಂತೆ ಮಾಡಿದರು ಮೊದಲು ಮಹಾರಾಷ್ಟ್ರ, ದಿಲ್ಲಿ, ಕರ್ನಾಟಕದ ಸಹೋದರ ಸಹೋದರಿಯರನ್ನು ನಿಲ್ಲುವಂತೆ ಮಾಡಿದರು ಮತ್ತು ವಚನ ಕೊಡುವಂತೆ ಮಾಡಿದರು ನಂತರ ಯು.ಪಿ ಅವರಿಗೆ ಸೇವೆಯ ಅಭಿನಂದನೆಗಳನ್ನು ತಿಳಿಸಿದರು).

ಬಹಳಷ್ಟು ಮಕ್ಕಳು ಉತ್ಸಾಹ ಉಲ್ಲಾಸಗಳಿಂದ ಇದ್ದಾರೆ ಮತ್ತು ಯಾರಾದರೆ ಪ್ರಯತ್ನವನ್ನು ಮಾಡುತ್ತೇವೆ ಎಂದು ಕೈಯನ್ನು ಎತ್ತಿದ್ದಾರೆಯೋ ಅದು ಕೂಡ ಸತ್ಯವೇ. ಆದರೆ ಬಾಪ್‌ದಾದಾ ಹೇಳುತ್ತಿದ್ದಾರೆ ಧೈರ್ಯವನ್ನಿಡುವುದರಿಂದ, ದೃಢ ಸಂಕಲ್ಪ ಮಾಡುವುದರಿಂದ ಎಲ್ಲವೂ ಒಳ್ಳೆಯದಾಗಿ ಬಿಡುತ್ತದೆ. ಮಾಸ್ಟರ್

ಸರ್ವಶಕ್ತಿವಾನ್ ಆಗಿ ಸಂಕಲ್ಪ ಮಾಡಿದರೆ ಮಾಡಲು ಆಗದೆ ಇರುವಂತಹದ್ದು ಏನಿದೆ? ವಿಶ್ವವನ್ನು ಪರಿವರ್ತನೆ ಮಾಡಬಲ್ಲರಾಗಿದ್ದಾಗ, ನಿಮ್ಮನ್ನು ನೀವು ಪರಿವರ್ತನೆ ಮಾಡಿಕೊಳ್ಳಲಾಗುವುದಿಲ್ಲವೇ? ಆದ್ದರಿಂದ ಯಾರಾದರೂ ಹಾಗೆಯೇ ಎನ್ನುತ್ತಿದ್ದೀರೋ ಅವರಿಗೆ ಬಾಪ್‌ದಾದಾ ಹೇಳುತ್ತಿದ್ದಾರೆ. ಅಮೃತ ವೇಳೆ ಸದಾ ಈ ಸಂಕಲ್ಪವನ್ನು ಪ್ರತ್ಯಕ್ಷ ಮಾಡಿರಿ. ನಾವು ನಿರ್ವಿಘ್ನವಾಗಿ ಇರಲೇಬೇಕು ಮತ್ತು ಪ್ರಯತ್ನ ಮಾಡುತ್ತೇವೆ ಎನ್ನುವವರಂತೂ ಅಮೃತ ವೇಳೆ ಯೋಗದ ನಂತರ ಸದಾ ಇದೇ ದೃಢಸಂಕಲ್ಪವನ್ನು ರಿವೈಸ್ ಮಾಡಿಕೊಳ್ಳಿ - ಧೈರ್ಯವಿದ್ದ ಮಕ್ಕಳಿಗೆ ತಂದೆಯು ಸಹಾಯ ಮಾಡುತ್ತಾರೆ. ಇದರಿಂದ ಪ್ರಯತ್ನ ಮಾಡುವ ಬದಲು ಸಫಲತೆಯನ್ನು ಅನುಭವ ಮಾಡಿಕೊಳ್ಳುತ್ತಿರಿ. ಬಾಪ್‌ದಾದಾ ಮಕ್ಕಳ ಫಲಿತಾಂಶವನ್ನು ನೋಡಿ ಸದಾ ಖುಷಿ ಪಡುತ್ತಿರುತ್ತಾರೆ ಆದರೂ ಧೈರ್ಯಕ್ಕೆ ವಿಶೇಷವಾಗಿ ಶುಭಾಶಯಗಳನ್ನು ಕೊಡುತ್ತಿದ್ದಾರೆ. ಮೂರು ತಿಂಗಳಿನ ಅಭ್ಯಾಸ ಸದಾಕಾಲದ ಅನುಭವಿಯನ್ನಾಗಿ ಮಾಡುತ್ತದೆ. ತಿಂಗಳುಗಳು ಯಾವುದೋ ಒಂದು ರೀತಿ ಮುಗಿದು ಹೋಗಬೇಕು ಎಂದು ಕಷ್ಟದಿಂದ ಅಲ್ಲದೇ, ಉತ್ಸಾಹ ಉಲ್ಲಾಸಗಳಿಂದ ಮಾಡಬೇಕು. ಒಂದು ವೇಳೆ ಕಷ್ಟದಿಂದ ಮಾಡಿದರೆ ಅದು ಸದಾ ಕಾಲಕ್ಕಾಗಿ ಇರುವುದಿಲ್ಲ. ಉತ್ಸಾಹ ಉಲ್ಲಾಸಗಳಿಂದ ಮಾಡಿದರೆ ಸದಾ ಕಾಲದ ಅನಾದಿ, ಅವಿನಾಶಿ ಸಂಸ್ಕಾರ ಪ್ರತ್ಯಕ್ಷವಾಗಿ ಬಿಡುತ್ತದೆ. ತಿಳಿಯಿತೆ!

**ಒಳ್ಳೆಯದು, ಎಲ್ಲಾ ಕಡೆಯ ಸರ್ವ ಸ್ವರಾಜ್ಯದ ಅಧಿಕಾರಿ ಆತ್ಮರಿಗೆ, ಸದಾ ಯಾವಾಗಲೂ ಅಖಂಡ ರಾಜ್ಯಕ್ಕೆ ಅರ್ಹರಾದ ಆತ್ಮರಿಗೆ, ತಂದೆಯಂತೆ ಯಾವಾಗಲೂ ಕರ್ಮಾತೀತ ಹಂತವನ್ನು ತಲುಪುವಂತಹ ಆತ್ಮರಿಗೆ, ತಂದೆಯನ್ನು ಅನುಸರಿಸುವ ತೀವ್ರಪುರುಷಾರ್ಥಗಳಿಗೆ, ಪರಸ್ಪರ ಯಾವಾಗಲೂ ಶುಭ ಭಾವನೆ, ಶುಭಕಾಮನೆಯ ಸಹಯೋಗ ನೀಡುವಂತಹ ಶುಭಚಿಂತಕ ಮಕ್ಕಳಿಗೆ ನೆನಪು ಪ್ರೀತಿ ಹಾಗೂ ನಮಸ್ತೆ.**

ರಿವೈಸ್ ಕೋರ್ಸ್ 15-03-1999.

***ಕರ್ಮಾತೀತ ಸ್ಥಿತಿಯವರೆಗೆ ತಲುಪಲು ನಿಯಂತ್ರಣಾ ಶಕ್ತಿಯನ್ನು ಹೆಚ್ಚಿಸಿಕೊಳ್ಳಿ ಮತ್ತು ಸ್ವ-ರಾಜ್ಯದ ಅಧಿಕಾರಿ ಆಗಿ.***

ನೀವು ಪರಂಧಾಮಕ್ಕೆ ಹೋದರೆ ಮನಸ್ಸು ಪರಧಾಮಕ್ಕೆ ಹೋಗಬೇಕು. ಸೂಕ್ಷ್ಮವತನಕ್ಕೆ ಹೋದರೆ ಸೆಕೆಂಡ್ ನಲ್ಲಿ ಅಲ್ಲಿಗೆ ಹೋಗಬೇಕು. ನೀವು ಏನು ಯೋಚಿಸುತ್ತಿರೋ ಅದು ಆದೇಶವಾಗಲಿ. ಈಗ ನಿಯಂತ್ರಣಾ ಶಕ್ತಿಯನ್ನು ಹೆಚ್ಚಿಸಿಕೊಳ್ಳಿ ಸಣ್ಣ ಸಣ್ಣ ಸಂಸ್ಕಾರಗಳಲ್ಲಿ ಮಾಡುವ ಯುದ್ಧದಲ್ಲಿ ಸಮಯವನ್ನು ವ್ಯರ್ಥ ಗೊಳಿಸಬೇಡಿ. ಇಂದು ಈ ಸಂಸ್ಕಾರವನ್ನು ಓಡಿಸಿ ನಾಳೆ ಇನ್ನೊಂದು ಸಂಸ್ಕಾರವನ್ನು ಓಡಿಸಿದಿರಿ ಎಂಬಂತೆ ಆಗಬಾರದು. ನಿಯಂತ್ರಣಾ ಶಕ್ತಿಯನ್ನು ಅಳವಡಿಸಿಕೊಂಡರೆ ಹೀಗೆ ವಿವಿಧ ಸಂಸ್ಕಾರಗಳ ಮೇಲೆ ಸಮಯವು ಕಳೆಯಬೇಕಾಗಿರುವುದಿಲ್ಲ. ಎಂದು ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಪರಮಾತ್ಮ ಪಾಲನೆ ಪರಮಾತ್ಮನ ಪ್ರೀತಿಯ ಭಾಗ್ಯಕ್ಕೆ ಅಧಿಕಾರಿ.

2. ನಾನು ರಾಜನ ಮಗುವಾಗಿ ಇರುವ ರಾಜಯೋಗಿ.

3. ನಾನು ವರ್ತಮಾನದಲ್ಲಿಯೂ ಸಹ ರಾಜನು ಮತ್ತು ಭವಿಷ್ಯದಲ್ಲಿಯೂ ರಾಜನಾಗುವ ಡಬಲ್ ರಾಜ್ಯ ಪದವಿಯನ್ನು ಅನುಭವ ಮಾಡುತ್ತಿದ್ದೇನೆ.

4. ನಾನು ರಾಜ್ಯಶಕ್ತಿ ಮತ್ತು ನಿಯಂತ್ರಣಾ ಶಕ್ತಿ(ರೂಲಿಂಗ್ ಪವರ್ ಮತ್ತು ಕಂಟ್ರೋಲಿಂಗ್ ಪವರ್) ನಿಂದ ಪ್ರತಿಯೊಂದು ರಾಜ್ಯ, ಕಾರ್ಯ ವ್ಯವಹಾರ ನನ್ನ ಆಜ್ಞೆಯ ಪ್ರಕಾರ ನಡೆಸುವ ಅಧಿಕಾರಿಯಾಗಿದ್ದೇನೆ.

5. ನಾನು ಸ್ವಯಂನ ವ್ಯರ್ಥ ಸಂಕಲ್ಪಗಳು ಅರ್ಥಾಥ್ ವ್ಯರ್ಥವನ್ನು ಆಲೋಚಿಸುವುದು, ವ್ಯರ್ಥವಾಗಿ ಸಮಯವನ್ನು ಕಳೆಯುವುದು ಮತ್ತು ವ್ಯರ್ಥ ಮಾತು ಅವುಗಳನ್ನು ಕೇಳುವುದಾದರೂ ಕೇಳಿಸುವುದಾದರೂ ಮತ್ತು ಸೋಮಾರಿತನದ ಸಂಸ್ಕಾರದ ಮೇಲೆ ವಿಶೇಷ ಗಮನವಿಟ್ಟು ಮಾಯೆಯ ಯುದ್ಧದಿಂದ ರಕ್ಷಿಸಿಕೊಳ್ಳುವ ಸಮರ್ಥ ಸ್ವರೂಪ.

6. ನಾನು ತಂದೆಯ ಜೊತೆಯನ್ನು ಕಂಬೈನ್ಡ್ ಸ್ಥಿತಿಯನ್ನು ಸರ್ವ ಶಕ್ತಿಗಳನ್ನು ಸದಾ ಪ್ರತಿಯೊಂದು ಕರ್ಮದಲ್ಲಿ ಸ್ವಯಂ ಅನುಭವ ಮಾಡಿಕೊಂಡು ಇತರರಿಗೂ ಅನುಭವ ಮಾಡಿಸುವ ಅಖಂಡ ರಾಜ್ಯಾಧಿಕಾರಿ.

4. ನಾನು ಧೈರ್ಯದಿಂದ ತಂದೆಯ ಸಹಾಯವನ್ನು ಪಡೆದಿದ್ದೇನೆ.

5. ನಾನು ಸ್ವಯಂನ ಮೇಲೆ ಅರ್ಥಾತ್ ಪ್ರತಿಯೊಂದು ಕರ್ಮೇಂದ್ರಿಯದ ಮೇಲೆ ನಿಯಂತ್ರಣಾ ಶಕ್ತಿಯ ಅಭ್ಯಾಸದಿಂದ ಪಾಸ್ ವಿತ್ ಆನರ್ ಮತ್ತು ರಾಜ್ಯಾಧಿಕಾರಿ ಆಗಿದ್ದೇನೆ.

6. ನಾನು ಬೇರೆ ಬೇರೆ ಸಂಸ್ಕಾರಗಳನ್ನು ತೊಲಗಿಸುವುದರಲ್ಲಿ ಸಮಯವನ್ನು ಉಪಯೋಗಿಸದೇ ನಿಯಂತ್ರಣಾ ಶಕ್ತಿಯನ್ನು ಧಾರಣೆ ಮಾಡಿ ಕರ್ಮಾತೀತ ಸ್ಥಿತಿಗೆ ತಲುಪಿದ್ದೇನೆ.

7. ನಾನು ತಂದೆಯ ಸಮಾನವಾಗಿ ಕರ್ಮಾತೀತವಾಗಿ ತಂದೆಯ ಜೊತೆಯೇ ಹೋಗಿದ್ದೇನೆ.

8. ನಾನು ಬ್ರಹ್ಮಾ ತಂದೆಯ ಸಮಾನವಾಗಿ ನನ್ನ ರಾಜ್ಯದಲ್ಲಿನ ಕರ್ಮಚಾರಿಗಳು ನಿಯಮಾನಸಾರ ಆಜ್ಞಾನುಸಾರ ಇವೆಯೇ ಎಂದು ರಾಜ್ಯ ದರ್ಬಾರನಿಟ್ಟುಕೊಂಡು ಪರಿವರ್ತನೆಯಾದ ಕರ್ಮಾತೀತ ಸ್ವರೂಪ.

9. ನಾನು ಕರ್ಮಾತೀತ ಸ್ಥಿತಿಯಿಂದ ಒಂದೇ ಸಮಯದಲ್ಲಿ 3 ಸೇವೆಗಳು ಮನಸಾ, ವಾಚಾ, ಸಂಬಂಧ ಸಂಪರ್ಕದಲ್ಲಿ ನನ್ನ ನಡವಳಿಕೆಯಲ್ಲಿ, ಚಹರೆಯಿಂದ ಮಾಡಿ ಸಫಲತೆಯನ್ನು ಸಹಜವಾಗಿ ಅನುಭವ ಮಾಡಿಕೊಂಡಿದ್ದೇನೆ.

10. ನನಗೆ ಸಂಕಲ್ಪ, ಸಮಯ, ಸಂಸ್ಕಾರ ಎಲ್ಲವುಗಳ ಮೇಲೆ ನಿಯಂತ್ರಣವಿರುವ ನಿಯಂತ್ರಣಾ ಶಕ್ತಿ ಸ್ವರೂಪ.

11. ನಾನು ಅಮೃತ ವೇಳೆಯಲ್ಲಿ ನಾನು ನಿರ್ವಿಘ್ನವಾಗಿರಲೇಬೇಕು ಎಂಬ ಸಂಕಲ್ಪವನ್ನು ಮಾಡಿ ಪ್ರತ್ಯಕ್ಷ ಮಾಡಿದ್ದೇನೆ.